**<u>ದಿನಾಂಕಃ 21-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ</u>**

ನಾನು ಕೊಲ್ಲಾಪೂರದ ರತ್ನಗಿರಿಯಲ್ಲಿ ವಾಸವಾಗಿರುತ್ತೇನೆ. ನಾನು 20-25 ವರ್ಷಗಳಿಂದ ಅಲ್ಲಿಯೇ ಇರುತ್ತೇವೆ. ನನ್ನ ಗಂಡನ ಊರು ಹುಣಸಗಿ ಇರುತ್ತದೆ. ನಾನು ನನ್ನ ಗಂಡ ಇಬ್ಬರೂ ರತ್ನಗಿರಿಯಲ್ಲಿ ವಾಸಿಸುತ್ತೇವೆ. ನನ್ನ ಮದುವೆಯಾಗಿ 45 ವರ್ಷಗಳು ಆಗಿರುತ್ತವೆ. ನನ್ನ ಲಗ್ನದ ಸಮಯದಲ್ಲಿ ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ಮದುವೆಯನ್ನು ನನ್ನ ಅಣ್ಣಂದಿರು ಮಾಡಿರುತ್ತಾರೆ. ನಮ್ಮ ಸಹೋದಾರ ಪೀರಸಾಬನು ತೀರಿಕೊಂಡು 3 ವರ್ಷಗಳು ಆಗಿರುತ್ತವೆ. ಇನ್ನೊಬ್ಬ ಸಹೋದರನಾದ ಬಾಷಾಸಾಬ ಈಗ ಎರಡುವರೆ ವರ್ಷಗಳ ಹಿಂದೆ ತೀರಿಕೊಂಡಿರುತ್ತಾನೆ. ಇನ್ನೊಬ್ಬ ಸಹೋದರ ಹುಸೇನಸಾಬ ಈತನು 05 ವರ್ಷಗಳ ಹಿಂದೆ ತೀರಿಕೊಂಡಿರುತ್ತಾನೆ. ನಬಿಸಾಬ ಈತನು ಸಹ 3 ವರ್ಷಗಳ ಹಿಂದೆ ತೀರಿಕೊಂಡಿರುತ್ತಾನೆ. ಮೇಲೆ ಹೇಳಿದ ನಮ್ಮ ಸಹೋದರರು ಯಾವಾಗ ತೀರಿಕೊಂಡಿರುತ್ತಾರೆ ಎಂದು ದಿನಾಂಕವನ್ನು ವಾದಪತ್ರದಲ್ಲಿ ಬರೆಸಿರುತ್ತೇನೆ. ಬಾವಾಸಾಬ ಯಾವ ದಿನಾಂಕದಂದು ತೀರಿಕೊಂಡಿರುತ್ತಾನೆ ಎಂದು ಹೇಳಿ ಬರೆಸಿರುತ್ತೇನೆ. ಬಾಷಾಸಾಬ ಮತ್ತು ಪೀರಸಾಬ ಇವರ ನೀರಲಗಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಹುಸೇನಸಾಬ ಈತನು ಒಣಕಿಹಾಳ ಗ್ರಾಮದಲ್ಲಿ ವಾಸವಾಗಿದ್ದನು. ಎಲ್ಲಾ ಸಹೋದರರು ಒಂದೇ ಊರಿನಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೊಲಮನೆ ಕೂಡಿಯೇ ಇರುತ್ತವೆ ಎಂದು ನುಡಿಯುತ್ತಾರೆ. ನಮ್ಮ ತವರು ಮನಯಲ್ಲಿ ಒಟ್ಟು 05 ಮನೆಗಳು ಇರುತ್ತವೆ. ಸದರಿ 05 ಮನೆಗಳನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ಸದರಿ 05 ಮನೆಗಳ ಪೈಕಿ 02 ಮನೆಗಳು ಬನಹಟ್ಟಿಯಲ್ಲಿ, 02 ಮನೆಗಳು ನೀರಲಗಿಯಲ್ಲಿ ಮತ್ತು ಇನ್ನೊಂದು ಮನೆ ಹುಣಸಗಿಯಲ್ಲಿ ಇರುತ್ತವೆ. 05 ಮನೆಗಳ ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ 05 ಮನೆಗಳು ಹೊರತಾಗಿ 04 ಎಕರೆ 4 ಗುಂಟೆಯ ಒಂದು ಜಮೀನು ಇರುತ್ತದೆ. ಮೇಲೆ ಹೇಳಿದ ಮನೆಗಳು ಮತ್ತು ಜಮೀನು

ತೀರಿಕೊಂಡ ಸಹೋದರರ ಹೆಸರನಲ್ಲಿ ಇದ್ದವು. 04 ಜನ ಅಣ್ಣಂದಿರ ಹೆಸರಿನಲ್ಲಿ ಇರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಅಣ್ಣಂದಿರ ಹೆಸರು ಪಹಣಿಯಲ್ಲಿ ಎಷ್ಟು ವರ್ಷಗಳಿಂದ ದಾಖಲಾಗಿದ್ದವು ಅಂದರೆ ಸಾಕ್ಷಿಯು ಅವರ ಹೆಸರಿನಲ್ಲಿ ದಾಖಲಾಗಿರುವುದಿಲ್ಲ, ಕೇವಲ ನಬಿಸಾಬ ಈತನ ಹೆಸರಿನಲ್ಲಿ ಇದ್ದವು, ಆತನು ತೀರಿಕೊಂಡ ನಂತರ ಆತನ ಮಕ್ಕಳ ಹೆಸರಿನಲ್ಲಿ ದಾಖಲಾಗಿರುತ್ತವೆ ಎಂದು ನುಡಿಯುತ್ತಾರೆ. ನನ್ನ ತೀರಿಕೊಂಡ ಅಣ್ಣಂದಿರು ದಾವಾ ಆಸ್ತಿಯಲ್ಲಿ ಪಾಲು ಕೇಳಿದ್ದರು. ಸಾಕ್ಷಿ ಮುಂದುವರೆದು ಪಾಲು ಮುಂದೆ ಕೊಡುತ್ತೇವೆ ಎಂದು ಹೇಳುತ್ತಿದ್ದರು. ಸದರಿಯವರು 20 ವರ್ಷಗಳಿಂದ ಪಾಲು ಕೇಳುತ್ತಾ ಬಂದಿದ್ದರು. 20 ವರ್ಷಗಳಿಂದಲೂ ಪಾಲು ಕೇಳಿದರೂ ಕೊಟ್ಟಿರುವುದಿಲ್ಲ ಎಂದರೆ ಸರಿ. 20 ವರ್ಷಗಳ ಪಾಲು ಕೇಳಿದಾಗಲೂ ಮತ್ತು ಅವರು ಪಾಲುಕೊಡದೇ ಇದ್ದಾಗ ನನ್ನ ತೀರಿಕೊಂಡ ಅಣ್ಣಂದಿರು ನ್ಯಾಯಾಲಯಕ್ಕೆ ದಾವೆ ಸಲ್ಲಿಸಿರುವುದಿಲ್ಲ. ನನ್ನ ಸಹೋದರರ ಯಾವಾಗ ತೀರಿಕೊಂಡಿರುತ್ತಾರೆ ಎಂದು ತೋರಿಸಲು ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

02. ದಾವಾ ಆಸ್ತಿಯ ಚಕ್ಕಬಂದಿ ನನಗೆ ಹೇಳಲು ಬರುವುದಿಲ್ಲ. ನನ್ನ ಅಣ್ಣ ಲಾಲಾಸಾಬನಿಗೆ ಚಕ್ಕಬಂದಿ ಹೇಳಲು ಬರುವುದಿಲ್ಲ ಎಂದರೆ ಸರಿ. ನನ್ನ ಮದುವೆಯಾದ ನಂತರ ನಾನು ಗಂಡನ ಮನೆಗೆ ಹೋಗಲಾರದೇ ನಾನು ನನ್ನ ತವರು ಮನೆಯಲ್ಲಿಯೇಲ ಇದ್ದೆನು. ನನ್ನ ಗಂಡನಿಗೆ ಓದಲು ಬರೆಯಲು ಬರುವುದಿಲ್ಲ. ನಾನು ಮದುವೆಯಾದ ನಂತರ ನನ್ನ ಗಂಡನ ಜೊತೆ ನಮ್ಮ ಊರಿನಲ್ಲಿಯೇ ವಾಸ ಇದ್ದೆನು ಆದರೆ ನಾನು ಇದ್ದ ಮನೆಯ ನಂಬರ ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆ ಯಾವಾಗ ತೀರಿಕೊಂಡಿರುತ್ತಾನೆ ಎಂದು ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಂದೆ ಮರಣ ಪ್ರಮಾಣ ಪತ್ರವನ್ನು ನಮ್ಮ ವಕೀಲರಿಗೆ ತೋರಿಸಿರುತ್ತೇನೆ. ನನ್ನ ತಂದೆ ಯಾವ ವರ್ಷದಲ್ಲಿ ತೀರಿಕೊಂಡಿರುತ್ತಾನೆ ಎಂದು

ನಮ್ಮ ವಕೀಲರು ನನಗೆ ತಿಳಿಸಿರುವುದಿಲ್ಲ.

03. ನನ್ನ ತಂದೆ ಬಾವಾಸಾಬ 1974 ರಲ್ಲಿ ಮರಣಹೊಂದಿರುತ್ತಾನೆ ಎಂದರೆ ಸರಿ. ನನ್ನ ತಂದೆ ತೀರಿಕೊಳ್ಳುವುದಕ್ಕಿಂತ 06 ವರ್ಷಗಳ ಮುಂಚೆ ದಾವಾ ಆಸ್ತಿ ನಬೀಸಾಬನ ಹೆಸರಿನಲ್ಲಿ ಆಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಮೋಸದಿಂದ ಮಾಡಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ ದಾಖಲೆಗಳಲ್ಲಿ ನಬೀಸಾಬನ ಹೆಸರಿನಲ್ಲಿ ದಾವಾ ಆಸ್ತಿ 1967-68 ರಲ್ಲಿ ದಾಖಲಾಗಿರುತ್ತವೆ ಎಂದರೆ ಸಾಕ್ಷಿ ಮುಂದುವರೆದು ನಾನು ಸಲ್ಲಿಸಿದ ದಾಖಲೆ ನಿಜ ಇದ್ದು, ಅವನು ಮೋಸದಿಂದ ಮಾಡಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಮೋಸದಿಂದ ತನ್ನ ಹೆಸರಿನಲ್ಲಿ ಮಾಡಿಕೊಂಡಿರುವ ಸಂಗತಿಯನ್ನು ನನ್ನ ದಾವೆಯಲ್ಲಿ ಬರೆಸಿರುತ್ತೇನೆ.

04. ನಮ್ಮ 05 ಮನೆಗಳನ್ನು ನನ್ನ ಅಣ್ಣ ತನ್ನ ಹೆಸರಿನಲ್ಲಿಯೇ ದಾಖಲು ಮಾಡಿಕೊಂಡಿರುತ್ತಾನೆ. ದಾವಾ ಆಸ್ತಿ ನನ್ನ ತಂದೆ ತೀರಿಕೊಳ್ಳುವ ಸಮಯದಲ್ಲಿ ಅತನ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ಅಣ್ಣನಾದ ನಬೀಸಾಬನ ಹೆಸರಿನಲ್ಲಿ ದಾಖಲಾಗಿರುತ್ತದೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ಅಣ್ಣ ನಬೀಸಾಬನ ಹೆಸರಿನಲ್ಲಿ ದಾಖಲಾಗಿರುತ್ತವೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ತಂದೆ ತೀರಿಕೊಂಡ ನಂತರ ಎಷ್ಟು ವರ್ಷದ ನಂತರ ನಬೀಸಾಬ ತನ್ನ ಹೆಸರಿನಲ್ಲಿ ದಾಖಲು ಮಾಡಿಕೊಂಡಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಜಮೀನು ನನ್ನ ತಂದೆ ಜೀವಂತ ಇದ್ದಾಗಲೇ ನಬೀಸಾಬನಿಗೆ ಮೌಖಿಕವಾಗಿ ದಾನ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಮೌಖಿಕ ದಾನವನ್ನು ಇಬ್ಬರೂ ಸಾಕ್ಷಿದಾರರಾದ ಬಾಬಾಸಾಬ ತಂದೆ ಬಂದಗಿಸಾಬ ಸಿಪಾಯಿ ಮತ್ತು ಬಂದಗಿಸಾಬ ತಂದೆ ಖಾಸಿಂಸಾಬ ಮಸರಕಲ್ಲ ಇವರ

ಸಮಕ್ಷಮದಲ್ಲಿ 1968 ರಲ್ಲಿ ಮೌಖಿಕವಾಗಿ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. 1968 ರಿಂದ ನನ್ನ ತಂದೆ ತೀರಿಕೊಳ್ಳುವವರೆಗೂ ನಬೀಸಾಬನೇ ದಾವಾ ಆಸ್ತಿಯ ಮಾಲೀಕ ಮತ್ತು ಕಬ್ಜದಾರನು ಇದ್ದನು ಎಂದರೆ ಸರಿಯಲ್ಲ. ಸದರಿ ನಬೀಸಾಬನು ಮೃತಪಟ್ಟನಂತರ ವಾರಸ ಪ್ರಕಾರ ಆತನ ಹೆಂಡತಿ ಮತ್ತು ಮಕ್ಕಳು ಹೆಸರುಗಳು ದಾಖಲಾಗಿರುತ್ತವೆ ಎಂದರೆ ಸರಿಯಲ್ಲ. ನಬೀಸಾಬನ ಹೆಂಡತಿ ಮತ್ತು ಮಕ್ಕಳು ತಮ್ಮ ಕೌಂಟುಂಬಿ ಅಡಚಣೆಗಾಗಿ ದಾವಾ ಆಸ್ತಿಯನ್ನು 25 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಅಣ್ಣನಾದ ನಬೀಸಾಬನ ಸ್ವಂತ ಜಮೀನು ಆಗಿದ್ದರಿಂದ ನಾನಾಗಲಿ ಮತ್ತು ಉಳಿದ ನಮ್ಮ ಅಣ್ಣಂದಿರು ನಬೀಸಾಬನನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರು ದಾವಾ ಜಮೀನ ಮಾಲೀಕರು ಇದ್ದು, ಸದರಿಯವರು 25 ನೇ ಪ್ರತಿವಾದಿಗೆ ಮಾರಾಟ ಮಾಡಿದ ವಿಷಯ ಗೊತ್ತಿದ್ದರೂ ಸಹ ಅವರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1968 ರಿಂದ ನಬೀಸಾಬ ಮರಣಹೊಂದುವವರೆಗೂ ಆತನೆ ಅದರ ಮಾಲೀಕ ಮತ್ತು ಕಬ್ಜದಾರನು ಎಂದು ಗೊತ್ತಿದ್ದರೂ ಸಹ ನಾನು ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮರಣಹೊಂದುವಾಗ ಸದರಿ ದಾವಾ ಆಸ್ತಿಗೆ ಮಾಲೀಕ ಇರದೇ ಇದ್ದ ಕಾರಣ ನನಗೂ ನನ್ನ ಮಕ್ಕಳಿಗೂ ಮತ್ತು ನನ್ನ ಉಳಿದ ಅಣ್ಣಂದಿರಿಗೂ ಇದರಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.